ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ. ಬಂದಿದೆ.

ಆ. ಹೌದು.

ಇ 1. ಕ್ಷಾಮ ಪರಿಸ್ಥಿತಿಯನ್ನು ತಪ್ಪಿಸಲು ಸರ್ಕಾರವು ಡಿ.ಪಿ.ಎ.ಪಿ. ಯೋಜನೆಯನ್ನು ತಯಾರಿಸಿ ಬಿಜಾಪುರ ಜಿಲ್ಲೆಗೆ ಅಳವಡಿಸಿದೆ.

2. ನೀರಾವರಿ ಬಾವಿಗಳನ್ನು ತೋಡುವುದು ಹಾಗೂ ಪಂಪುಸೆಟ್ಟುಗಳನ್ನು ಅಳವಡಿಸುವ ಯೋಜನೆಯನ್ನು ತೀವ್ರವಾಗಿ ತೆಗೆದುಕೊಳ್ಳಲಾಗಿದೆ.

3. ಪಂಚವಾರ್ಷಿಕ ಯೋಜನೆಯಲ್ಲಿ ಭಾರಿ ನೀರಾವರಿ ಯೋಜನೆ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ.

4. ಒಣ ಭೂ ಸಾಗುವಳಿ ಯೋಜನೆ ಗಿಡ ನೆಡುವ ಮತ್ತು ಭೂ ಸಾರ ಸಂರಕ್ಷಣೆ ಕೆಲಸಗಳನ್ನು ನಡೆಸಲಾಗುತ್ತಿದೆ.

5. ಇನ್ನೂ ಹೆಚ್ಚಿನ ಧೀರ್ಘಾವಧಿ ಮತ್ತು ಶಾಶ್ವತವಾದ ಪರಿಹಾರಗಳನ್ನು ಸೂಚಿಸಲು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ.

ವಿಷಯ ; ಬದಾಮಿ ತಾಲ್ಲೂಕಿನ ತಾಂಡಾಗಳಿಗೆ ವಿದ್ಯುತ್ ಒದಗಿಸುವುದರ ಬಗ್ಗೆ

ಪ್ರ. ಸಂಖ್ಯೆ 515 (656) ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು.—ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ಬಾದಾಮಿ ತಾಲ್ಲೂಕು ಮೇಲಿನ ಹಲಶರ್ಶಿ ಹಾಗೂ ನರನೂರ ತಾಂಡಗಳನ್ನು ವಿದ್ಯುತ್ತೀಕರಣಗೊಳಿಸದಿರುವುದು ಸರ್ಕಾರದವರ, ಗಮನಕ್ಕೆ ಬಂದಿದೆಯೇ ;

ಆ. ಹಾಗಿದ್ದಲ್ಲಿ ಈ ವರ್ಷದಲ್ಲಿಯೇ ಆ ಗ್ರಾಮಗಳ ಜನರಿಗೆ ವಿದ್ಯುಚ್ಛಕ್ತಿ ಪೂರೈಸಲು ಸರ್ಕಾರದವರು ಕ್ರಮ ಕೈಕೊಳ್ಳುವರೆ ?

ಶ್ರೀ ಜೆ. ಹೆಚ್. ಪಟೇಲ್ (ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು).—

ಅ. ಹೌದು.

ಆ. ಈ ತಾಂಡಗಳಿಗೆ 1984-85ರ ಅವಧಿಯಲ್ಲಿ ವಿದ್ಯುತ್ತನ್ನು ಒದಗಿಸುವ ಗುರಿಯನ್ನು ಮಂಡಳಿಯು ಹೊಂದಿದೆ.

ವಿಷಯ : ಬಾದಾಮಿ ತಾಲ್ಲೂಕಿನ ಜನರಿಗೆ ಸರಕಾರಿ ಭೂಮಿ ಹಂಚುವಿಕೆ

ಪ್ರ. ಸಂಖ್ಯೆ 516 (991) ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ಬಾದಾಮಿ ತಾಲ್ಲೂಕಿನ ಜನರಿಗೆ ತಹಶೀಲ್ದಾರರವರು 1980 ರಿಂದ 1983ನೇ ಇಸವಿ ಜನವರಿವರೆಗೆ ಸರಕಾರಿ ಭೂಮಿ ಹಂಚಿಕೆ ತಗಾಯಿ ಮನ್ನಾ ಮರು ಹಂಚಿಕೆ ವಾರಸಾ ಪಾರ್ಟಿಸನ್ ಮಾಡಿದ ಸಂಖ್ಯೆ ಎಷ್ಟು (ವರ್ಷವಾರು ವಿವರಗಳನ್ನೊದಗಿಸುವುದು) ;

ಆ. ಇನ್ನೂ ಬಾಕಿ ಉಳಿದ ಕೆಲಸಗಳನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಸಚಿವರು).—

ಅ. ಬಾದಾಮಿ ತಹಶೀಲ್ದಾರರು 1980 ರಿಂದ 1983ನೇ ಜನವರಿ ವರಿಗೆ (ವರ್ಷವಾರು) ಮಾಡಿದ ಬೇರೆ ಬೇರೆ ಕೆಲಸಗಳ ವಿವರ ಈ ಕೆಳಗಿನಂತೆ ಇದೆ

ಅ. ನಂ.	ಕೆಲಸದ ವಿವರ		ವರ್ಷವಾರು ಮಾಡಿದ ಕೆಲಸ ಪ್ರಮಾಣ 1980-81	1981-82	1982-83 ಜನವರಿವರೆಗೆ ಎ-ಗು
1.	ಭೂಮಿ ಹಂಚಿಕೆ (ಎಕರೆಗಳಲ್ಲಿ)	....	*	*	26-17
2.	ತಗಾಯಿ ಮನ್ನಾ (ರೂ. ಗಳಲ್ಲಿ)	....	....	46,740	6,105
3.	ಮರು ಹಂಚಿಕೆ (ವತನ ಜಮೀನು ರಿಗ್ರ್ಯಾಂಟ್ ಎಕರೆಗಳಲ್ಲಿ)	....	1,125	146	3,491
4.	ವಾರ್ಸಾವಾಟ್ನಿ ಮುಂತಾದ ಹಕ್ಕು ದಾಖಲೆಗಳ ನಿಕಾಲೆ ಸಂಖ್ಯೆ	....	2,803	2,282	1,622

* (ಹೈಕೋರ್ಟ್ ತಡೆಯಾಜ್ಞೆಯ ಮೂಲಕ ಹೆಚ್ಚುವರಿ ಜಮೀನು ಇದ್ದಿಲ್ಲಾ)

ಆ, ಇನ್ನೂ ಬಾಕಿ ಉಳಿದಿರುವ ಕೆಲಸಗಳನ್ನು ಸಾಧ್ಯವಾದಷ್ಟು ತೀವ್ರಗತಿಯಲ್ಲಿ ಪೂರ್ಣಗೊಳಿಸ ಲಾಗುವುದು. ಮತ್ತು ಪ್ರಸ್ತುತ ಜಾರಿಯಲ್ಲಿರುವ ಕಾನೂನಿನ ಪ್ರಕಾರ ನಿಗದಿತ ವೇಳೆಯಲ್ಲಿ ಪೂರ್ತಿ ಗೊಳಿಸಲಾಗುತ್ತದೆ.

ವಿಷಯ : ಶಿವಮೊಗ್ಗ ಜಿಲ್ಲೆಯ ಕಂದಾಯ ಇಲಾಖೆಯ ದ್ವಿತೀಯ ದರ್ಜೆಯ ಗುಮಾಸ್ತರುಗಳ ಬಡ್ತಿ ನೀಡುವುದು

ಪ್ರ. ಸಂಖ್ಯೆ 505 (1248) ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ (ಸಾಗರ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ಶಿವಮೊಗ್ಗ ಜಿಲ್ಲೆಯ ರಾಜಸ್ವ ಇಲಾಖೆಯಲ್ಲಿ ದ್ವಿತೀಯ ದರ್ಜೆ ಗುಮಾಸ್ತರಾಗಿ ಇಪ್ಪತ್ತು ವರ್ಷಗಳಿಂದ ಕೆಲಸ ಮಾಡುತ್ತಿದ್ದು, ಮುಂಬಡ್ತಿಯಿಂದ ವಂಚಿತರಾಗಿರುವುದನ್ನು ಸರ್ಕಾರದವರು ಗಮನಿಸಿದ್ದಾರೆಯೇ ;

ಆ. ಈ ಬಗ್ಗೆ ಉಚ್ಚ ನ್ಯಾಯಾಲಯದ ತೀರ್ಪುಗಳನ್ವಯ ಸೇವಾ ಹಿರಿತನ ಪುನರ್ ಪರಿಶೀಲನೆ ಯಾಗಿ ಪಕ್ಕದ ಜಿಲ್ಲೆಗಳಲ್ಲಿ ಮುಂಬಡ್ತಿ ನೀಡಲಾಗಿದೆಯೆ ;

ಇ. ಶಿವಮೊಗ್ಗ ಜಿಲ್ಲಾಧಿಕಾರಿಗಳು ಈ ವಿಚಾರದಲ್ಲಿ ಸ್ಪಷ್ಟೀಕರಣ ಕೇಳಿ ಸರ್ಕಾರಕ್ಕೆ ಎರಡು ವರ್ಷಗಳ ಹಿಂದೆ ಬರೆದ ಕಡಿತಕ್ಕೆ ಉತ್ತರಿಸದಿರುವುದಕ್ಕೆ ಕಾರಣವೇನು ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ. ನಿಯಮಾವಳಿಗಳ ಪ್ರಕಾರ ಮುಂಬಡ್ತಿಗಳನ್ನು ಕೊಡಲಾಗಿದೆ.

ಆ. ನೀಡಲಾಗಿದೆ.

ಇ. ಕಾನೂನು ಮತ್ತು ಸಂಸದೀಯ ಇಲಾಖೆ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು) ಗಳೊಂದಿಗೆ ಸ್ಪಷ್ಟೀಕರಣ ನೀಡುವ ವಿಚಾರ ಪರ್ಯಾಲೋಚನೆಯಲ್ಲಿದೆ. ಆದಷ್ಟು ಬೇಗನೆ ನಿರ್ಧರಿಸಬಹುದು.

ವಿಷಯ : ಮಕಣಂಜ ಗ್ರಾಮಕ್ಕೆ ವಿದ್ಯುಚ್ಛಕ್ತಿ ಸರಬರಾಜು ಬಗ್ಗೆ

ಪ್ರ. ಸಂಖ್ಯೆ 519 (1372) ಶ್ರೀ ಬಾಕಿಲ ಹುಕ್ರಪ್ಪ (ಸುಳ್ಯ).—ಮಾನ್ಯ ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ಮಕಣಂಜ ಗ್ರಾಮಕ್ಕೆ ವಿದ್ಯುಚ್ಛಕ್ತಿ ಸರಬರಾಜು ಮಾಡಲು ಎರಡು ವರ್ಷಗಳ ಹಿಂದೆ ಮಂಜೂರಾತಿ ನೀಡಿದ್ದರೂ ಕೂಡ ಈವರೆಗೆ ಕೆಲಸವನ್ನು ಪ್ರಾರಂಭಿಸದಿರಲು ಕಾರಣವೇನು ;

ಆ. ಈ ಬಗ್ಗೆ ಸರ್ಕಾರದವರು ಕೈಕೊಂಡಿರುದ ಕ್ರಮವೇನು ;

ಶ್ರೀ ಜೆ. ಹೆಚ್ ಪಟೇಲ್ (ಅಬ್ಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು).—

ಅ. ಮಕಣಂಜ ಗ್ರಾಮಕ್ಕೆ ವಿದ್ಯುತ್ ಒದಗಿಸಲು ಎರಡು ವರ್ಷಗಳ ಹಿಂದೆ ಮಂಜೂರಾತಿ ದೊರೆಕಿಲ್ಲ.

ಆ. ಈ ಗ್ರಾಮಕ್ಕೆ ಸದ್ಯದಲ್ಲೇ ವಿದ್ಯುತ್ ಸರಬರಾಜು ಮಾಡುವ ಗುರಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಹೊಂದಿದೆ.

ವಿಷಯ : ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಪಡೆಯುವ ಮೊದಲು ರೈತರು ನೀಡಬೇಕಾದ ವಿವರ

ಪ್ರ. ಸಂಖ್ಯೆ. 520 (1280) ಶ್ರೀ ಎಲ್. ಜಿ. ತಿಮ್ಮಪ್ಪ ಹೆಗಡೆ (ಸಾಗರ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಪಡೆಯಲು ರೈತರು ಒದಗಿಸಬೇಕಾಗಿರುವ ದಾಖಲೆ ಗಳಾವುವು ;

ಆ. ಈ ಬಗ್ಗೆ ಈಗ ಬ್ಯಾಂಕಿನವರು ಅನುಸರಿಸುತ್ತಿರುವ ಕ್ರಮದಿಂದ ರೈತರಿಗೆ ಸಾಲ ಪಡೆಯಲು ವಿಳಂಬವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಇ. ತೀರಾ ಬಡ ರೈತರಿಗೆ ಈ ರೀತಿ ದಾಖಲೆ ಒದಗಿಸಲು ತೊಂದರೆಯಾಗುತ್ತಿರುವುದು ಸರ್ಕಾರ ದವರ ಗಮನಕ್ಕೆ ಬಂದಿದೆಯೇ :

ಈ, ವಾಣಿಜ್ಯ ಬ್ಯಾಂಕಿನವರು ರೈತರಿಗೆ ಸಾಲ ನೀಡಲು ಅನುಸರಿಸುತ್ತಿರುವ ಕ್ರಮಗಳೇನು ;

ಉ. ಭೂ ಬ್ಯಾಂಕಿನವರು ರೈತರಿಗೆ ಸಾಲ ನೀಡಲು ಅನುಸರಿಸುತ್ತಿರುವ ಕ್ರಮವನ್ನು ಸರಳ ಗೊಳಿಸುವ ಯೋಜನೆ ಸರ್ಕಾರದವರ ಮುಂದಿದೆಯೇ ?